# AKKAMAHADEVI WOMEN'S UNIVERSITY, VIJAYAPURA

……………………………………………………………………

**DATE: 27-10-2017**

**ಪ್ರಕಟಣೆಯ ಕೃಪೆಗಾಗಿ………….**

ವಿಜಯಪುರ: ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಆವರಣದ ಆಡಳಿತ ಭವನದಲ್ಲಿ ಪ.ಜಾ./ಪ.ಪಂ. ಘಟಕ ಮತ್ತು ಬಿಎಲ್‌ಡಿಇ ಸಂಸ್ಥೆಯ ಸಿದ್ದೇಶ್ವರ ಚಿತ್ರಕಲಾ ಮಹಾವಿದ್ಯಾಲಯ ಇವರ ಸಹಯೋಗದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮೂರು ದಿನದ ವರ್ಲಿಚಿತ್ರ ಕಲಾಕೃತಿಗಳ ಶಿಬಿರಕ್ಕೆ ಮಹಿಳಾ ವಿವಿ ಕುಲಪತಿ ಪ್ರೊ.ಸಬಿಹಾ ಚಿತ್ರ ಬಿಡಿಸುವ ಮೂಲಕ ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿ ಕಲಾವಿದರು ವಿವಿಯ ಆಡಳಿತ ಭವನದ ಕಟ್ಟಡದ ಗೋಡೆಯ ಮೇಲೆ ನಗರದ ಐತಿಹಾಸಿಕ ಸ್ಮಾರಕಗಳ ಚಿತ್ರ, ಜಾನಪದ ಸೊಗಡಿನ ಗ್ರಾಮೀಣ ಬದುಕಿನ ಚಿತ್ರಗಳು ಹಾಗೂ ಸಾಂಪ್ರದಾಯಿಕ ಚಿತ್ರಗಳನ್ನು ಬಿಡಿಸಿದರು.

ಕಾರ್ಯಕ್ರಮದಲ್ಲಿ ಕುಲಸಚಿವ ಪ್ರೊ.ಎಲ್.ಆರ್.ನಾಯಕ, ಸಿದ್ದೇಶ್ವರ ಚಿತ್ರಕಲಾ ಮಹಾವಿದ್ಯಾಲಯ ಪ್ರಾಚಾರ್ಯ ವಿ.ವಿ.ಹಿರೇಮಠ, ಪ್ರೊ.ಎಸ್.ಬಿ.ಮಾಡಗಿ, ಪ.ಜಾ./ಪ.ಪಂ. ಘಟಕದ ನಿರ್ದೇಶಕ ಡಾ.ಸಕ್ಪಾಲ್ ಹೂವಣ್ಣ, ಗಿರಿಜಾ ಬಿರಾದಾರ, ಕಲಾವಿದ ಪಿ.ಎಸ್.ಕಡೇಮನಿ, ವಿದ್ಯಾಧರ ಸಾಲಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ.ಓಂಕಾರ ಕಾಕಡೆ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಫೋಟೋ ಕ್ಯಾಪ್ಷನ್:

1) **ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಆವರಣದ ಆಡಳಿತ ಭವನದಲ್ಲಿ ಪ.ಜಾ./ಪ.ಪಂ. ಘಟಕ ಮತ್ತು ಬಿಎಲ್‌ಡಿಇ ಸಂಸ್ಥೆಯ ಸಿದ್ದೇಶ್ವರ ಚಿತ್ರಕಲಾ ಮಹಾವಿದ್ಯಾಲಯ ಇವರ ಸಹಯೋಗದಲ್ಲಿ ಮೂರು ದಿನದ ವರ್ಲಿಚಿತ್ರ ಕಲಾಕೃತಿಗಳ ಶಿಬಿರಕ್ಕೆ ಮಹಿಳಾ ವಿವಿ ಕುಲಪತಿ ಪ್ರೊ.ಸಬಿಹಾ ಚಿತ್ರ ಬಿಡಿಸುವ ಮೂಲಕ ಚಾಲನೆ ನೀಡಿದರು.**

